# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 8
Volume 1 Issue 8
ಮಂಗಳವಾರ 20-10-2015


Email: mahilavishesha@yahoo.com

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793


ಮೈಸೂರು
ಪುಟ 4
ಬೆಲೆ ₹ 2


## ವಿದ್ಯುದ್ದೀಪಾಲಂಕಾರದಿಂದ ವಿಜೃಂಭಿಸುತ್ತಿರುವ ಮೈಸೂರು ನಗರ



ನಾಡಹಬ್ಬದ ಪ್ರಯುಕ್ತ ಅರಮನೆ, ಚಾಮುಂಡಿಬೆಟ್ಟ ಪ್ರಮುಖ ರಸ್ತೆಗಳಾದ ಸಯ್ಯಾಜಿರಾವ್,ಅಶೋಕ, ಅರಸು, ನೂರಡಿ ಇತ್ಯಾದಿ ಹಾಗೂ ವೃತ್ತಗಳಲ್ಲಿ ಸಿಂಗರಿಸಿರುವ ದೀಪಾಲಂಕಾರ ಜನರನ್ನು ಆಕರ್ಷಿಸುತ್ತಿದೆ. ಖಾಸಗಿ ದರ್ಬಾರ್‌ಗೆ ಮುನ್ನ ರಾಜಮಾತೆ ಪ್ರಮೋದಾ ದೇವಿಯವರ ಕುಟುಂಬದಿಂದ ಯುವರಾಜನಿಗೆ ಶುಭ ಹಾರೈಸಿ ಸಿಂಹಾಸನದ ಮೇಲೆ ಕೂರಲು ಕಳುಹಿಸುತ್ತಿರುವುದು.

### ವಿದ್ಯಾರ್ಥಿನಿಯರೇ ಪ್ರತಿಭೆಯನ್ನು ತೋರಿಸಿ

ಹುಣಸೂರು ನಗರದ ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡಾ ಘಟಕಗಳ ಉದ್ಘಾಟನಾ ಸಮಾರಂಭ ನಡೆಯಿತು. ಈಗ ಹೆಣ್ಣು ಮಕ್ಕಳು ಸಾಧನೆಯ ಹಾದಿಯಲ್ಲಿದ್ದಾರೆ. ಸಮಯವನ್ನು ಹಾಳು ಮಾಡದೆ, ತರಗತಿಗೆ ಚಕ್ಕರ್ ಹಾಕದೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ನಿಮ್ಮಲ್ಲಿರುವ ಪ್ರತಿಭೆಯನ್ನು ಗುರುತಿಸಿ ಕೊಳ್ಳಿ ಎಂದು ಉಪವಿಭಾಗಾಧಿಕಾರಿ ಡಾ ಎ. ಸೌಜನ್ಯ ಕರೆ ನೀಡಿದರು.

### ಪದವಿ ದಾಖಲಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ

ಸರ್ಕಾರಿ ಹಾಗೂ ಖಾಸಗಿ ಪದವಿ ಕಾಲೇಜುಗಳಿಗೆ ಇನ್ನು ಮುಂದೆ ದಾಖಲಾಗಲು ಅರ್ಜಿಯನ್ನು



ಆನ್‌ಲೈನ್ ನಲ್ಲಿ ಸಲ್ಲಿಸಬೇಕೆಂದು ಕಾಲೇಜು ಶಿಕ್ಷಣ ಇಲಾಖೆ ತೀರ್ಮಾನಿಸಿದೆ. ಅರ್ಜಿ ಸ್ವೀಕರಿಸಿದ ಬಳಿಕ ವಿದ್ಯಾರ್ಥಿಗೆ ಮೊಬೈಲ್‌ನಲ್ಲಿ ಮೆಸೇಜ್ ಕಳುಹಿಸಲಾಗುವುದು. ಅರ್ಜಿ ಸಲ್ಲಿಸಲು ಶುಲ್ಕವಿರುವುದಿಲ್ಲ. ವಿವಿಧ ವಿಶ್ವ ವಿದ್ಯಾನಿಲಯದ ಶುಲ್ಕ ಬೇರೆ ಬೇರೆಯಾಗಿದ್ದು ಅದಕ್ಕೆ ನಮ್ಮ ಮಧ್ಯಸ್ಥಿಕೆ ಇಲ್ಲವೆಂದು ಇಲಾಖೆ ತಿಳಿಸಿದ್ದು ಆಯ್ಕೆ ಪ್ರಕ್ರಿಯೆ ಮಾತ್ರ ನಮ್ಮದೆಂದು ತಿಳಿಸಿದೆ.

### ಸೇವೆಯಾಗಿದ್ದ ಚಿಕಿತ್ಸೆ ಮಾಯ

ನಗರದಲ್ಲಿ ಜಯಲಕ್ಷ್ಮಿಪುರಂ ನ ಸರಸ್ವತಿ ಸಮುದಾಯ ಭವನದಲ್ಲಿ ಕಳೆದ ವಾರ ವಿಶ್ವ ಹಿರಿಯ ನಾಗರೀಕರ ದಿನಾಚರಣೆ ಸಮಾರಂಭವನ್ನು ವಿಶ್ರಾಂತ ಸಮಾಜಶಾಸ್ತ್ರ ಪ್ರಾಧ್ಯಾಪಕಿ ಡಾ. ಆರ್. ಇಂದಿರಾರವರು ಉದ್ಘಾಟಿಸಿದರು. ನಂತರ ಅವರು ಮಾತನಾಡುತ್ತಾ ಹಿಂದೆ ಚಿಕಿತ್ಸೆಯು ಸೇವೆಯಾಗಿದ್ದು ಇತ್ತೀಚೆಗೆ ಕೊಂಡುಕೊಳ್ಳುವ ವಸ್ತುವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಹಿರಿಯ ನಾಗರೀಕರುಗಳು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದು ಯಶಸ್ವಿಗೊಳಿಸಿದರು.

### ಆರ್. ರೂಪಶ್ರೀಗೆ ಡಾಕ್ಟರೇಟ್

ಡಾ ಕೆ.ಎಸ್. ರಂಗಪ್ಪ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ ಆರ್. ರೂಪಶ್ರೀ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಅಂಗೀಕರಿಸಿ ರಸಾಯನಶಾಸ್ತ್ರ ವಿಷಯದಲ್ಲಿ ಪಿಹೆಚ್‌ಡಿ ಪದವಿ ನೀಡಿದೆ.

### ಮಹಿಳಾ ಘಟಕಗಳ ಉದ್ಘಾಟನೆ

ಶ್ರೀರಂಗಪಟ್ಟಣದ ಸುಬ್ರಹ್ಮಣ್ಯ ಕಲ್ಯಾಣ ಮಂಟಪದಲ್ಲಿ ಜಯಕರ್ನಾಟಕ ಸಂಘಟನೆಯ ತಾಲ್ಲೂಕು, ನಗರ ಮತ್ತು ಮಹಿಳಾ ಘಟಕಗಳ ಉದ್ಘಾಟನೆ ಹಾಗೂ ಪದಾಧಿಕಾರಿಗಳ ನೇಮಕಾತಿ ಪತ್ರ ವಿತರಣ ಸಮಾರಂಭ ನಡೆಯಿತು. ಜಿಲ್ಲಾ ಕಛೇರಿಯ ಪದಾಧಿಕಾರಿಗಳು, ಪುರಸಭೆ ಸದಸ್ಯರು ಹಾಗೂ ನಾಗರೀಕರು ಭಾಗವಹಿಸಿದ್ದರು.

### ವಿದ್ಯಾರ್ಥಿನಿಯರಿಗೆ ಸನ್ಮಾನ

ಹಿಂದಿ ದಿವಸ್ ಹಾಗೂ ಗುರು ವಂದನಾ ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಚಂದ್ರವಳ್ಳಿ ಎಸ್‌ಜೆಎಂ ಕಾಲೇಜಿನಲ್ಲಿ ನಡೆಸಲಾಯಿತು. ಅತಿ ಹೆಚ್ಚು ಅಂಕವನ್ನು ಹಿಂದಿ ವಿಭಾಗದಲ್ಲಿ ಪಡೆದ ಮೀನಾ ಸುಮಯ್ಯ, ಮನಿಷಾ ಮಧುಶ್ರೀ, ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯರು, ಶಿಕ್ಷಕವೃಂದ, ವಿದ್ಯಾರ್ಥಿಗಳು, ಉಪನ್ಯಾಸಕರು ಉಪಸ್ಥಿತರಿದ್ದರು. ಇಂತಹ ಕಾರ್ಯಕ್ರಮ ಗಳು ಎಲ್ಲೆಡೆ ನಡೆಯಬೇಕು ಹಾಗಾದಾಗ ಮಾತ್ರ ಹಿಂದಿ ಭಾಷೆಗೂ ಹಾಗೂ ಪ್ರತಿಭಾವಂತರಿಗೂ ಒಳ್ಳೆಯ ಪುರಸ್ಕಾರ ಸ್ಥಾನಮಾನ ದೊರೆಯಲಿದೆ.

### ಸರ್ಕಾರ ನೇಮಕಾತಿ - ಮಹಿಳೆಯರಿಗೆ 33%

ಕರ್ನಾಟಕ ಸರ್ಕಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಶಿಫಾರಸ್ಸಿನಂತೆ ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಮೀಸಲಾತಿ ಪ್ರಮಾಣವನ್ನು 30 ರಿಂದ 33% ಕ್ಕೆ ಏರಿಸಿ ಆದೇಶ ಹೊರಡಿಸಿದೆ. ಸಮಿತಿಯು ಹೆಚ್ಚಿನ ಮೀಸಲಾತಿ ಮಹಿಳೆಯರಿಗೆ ನೀಡಬೇಕು ಹಾಗೂ ಇನ್ನೂ ಶಕ್ತಿಯುತಗೊಳಿಸಿ ಕೆಲಸ ಆಗಬೇಕೆಂದು ತಿಳಿಸಿತ್ತು. ಸರ್ಕಾರದ ಈ ನಿರ್ಧಾರಕ್ಕೆ ಮವಿಬಳಗವು ವಿಶೇಷವಾಗಿ ಅಭಿನಂದಿಸಿದೆ.

### ಬಯೋ ಕೈ ಪಿಡಿ

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಬೆಂಗಳೂರು ಇಂಡಿಯಾ ಬಯೋ 2016ರ ಅನಾವರಣ ಕಾರ್ಯಕ್ರಮದಲ್ಲಿ ಐಟಿ-ಬಿಟಿ-ಎಸ್‌ಟಿ ಇಲಾಖೆ ಪ್ರಧಾನ ಕಾರ್ಯದರ್ಶಿ ವಿ. ಮಂಜುಳಾ, ಬಯೋಕಾನ್‌ನ ಕಿರಣ್ ಮುಜುಂದಾರ್‌ಷಾ ಹಾಗೂ ಐಟಿ-ಸಚಿವ ಎಸ್. ಆರ್. ಪಾಟೀಲ್ ಅವರಿಂದ ಕಾರ್ಯಕ್ರಮ ಕೈಪಿಡಿ ಬಿಡುಗಡೆಯಾಯಿತು.. ಕೈಪಿಡಿಯಲ್ಲಿನ ಅಂಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಮಾನವ ಕುಲಕ್ಕೆ ಒಳ್ಳೆಯದು.

### ಮಿಷನ್ ಇಂದ್ರಧನುಷ್



ಮೈಸೂರು ನಗರದ ಅಶೋಕಪುರಂ ನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 'ಮಿಷನ್ ಇಂದ್ರ ಧನುಷ್' ಅಭಿಯಾನಕ್ಕೆ ಜಿ. ಪಂ. ಅಧ್ಯಕ್ಷೆ ಡಾ. ಪುಷ್ಪಾವತಿ ಅಮರನಾಥ್ ಚಾಲನೆ ನೀಡಿದರು. ಇದು ಲಸಿಕೆ ಹಾಕುವ ಸಲುವಾಗಿ ಈ ಅಭಿಯಾನ ಒಂದು ವಾರ ಕಾಲ ನಡೆಯಲಿದೆ. ವಂಚಿತ ಮಕ್ಕಳು ಹಾಗೂ ಗರ್ಭಿಣಿಯರು ಈ ಕಾರ್ಯಕ್ರಮದ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

### ವಿಜಯದಶಮಿ ಹಬ್ಬದ ಶುಭಾಶಯಗಳು

ನಮ್ಮ ಪತ್ರಿಕೆಯ ಓದುಗರಿಗೆ, ಜಾಹೀರಾತುದಾರರಿಗೆ, ಹಿತೈಷಿಗಳಿಗೆ, ಸ್ನೇಹಿತರುಗಳಿಗೆ, ನಗರದ ಹಾಗೂ ನಾಡಿನ ಸಮಸ್ತ ಮಹಿಳಾ ಮತ್ತು ಪುರುಷ ನಾಗರೀಕರುಗಳಿಗೆ,ಆಯುಧಪೂಜೆ ಹಾಗೂ ವಿಜಯದಶಮಿ ಹಬ್ಬದ ಶುಭಾಶಯಗಳು. ನಿಮ್ಮೆಲ್ಲರಿಗೂ ಹೆಚ್ಚಿನ ಆಯುರಾರೋಗ್ಯ, ಐಶ್ವರ್ಯವನ್ನು ಮಾತೆ ಚಾಮುಂಡೇಶ್ವರಿ ದೇವಿಯು ನೀಡಲಿ.

- ಸಂಪಾದಕರು

## ಬದುಕೇ ಹೀಗೆ !

**"ಬೆಳಕಿನಲ್ಲಿ ಬೆಳಕಿಗೆ ಬೆಲೆಯಿಲ್ಲ; ಆದರೆ ಕತ್ತಲೆಯಲ್ಲಿ ಕಿರುದೀಪಕ್ಕೂ ಹಿರಿದಾದ ಬೆಲೆಯುಂಟು" - ಅನಾಮಿಕ**

## ನಡೆ - ನುಡಿ

"ನಿಮ್ಮಲ್ಲಿರುವ ಆಹಂ ಎಂದಿಗೂ ಚಿಗುರದಂತೆ ಎಚ್ಚರ ವಹಿಸಿ.."

## ಒಗಟು

ಕರಿಸೀರೆ ಉಟ್ಟಾಳೇ, ಕಾಲುಂಗುರ ತೊಟ್ಟಿದ್ದಾಳೇ ಮೇಲೆ ಹೋಗುತ್ತಾಳೆ, ಕೆಳಗೆ ಬರುತ್ತಾಳೆ ಯಾರು ?

**ಉತ್ತರ :** ಒನಕೆ

- ಸೌಮ್ಯ ಮಂಡ್ಯ

## ಹೇಗಿರಬೇಕು?

"ನಾಣ್ಯಗಳು ಸದಾ ಸದ್ದು ಮಾಡುತ್ತಿರುತ್ತವೆ ಆದರೆ ನೋಟುಗಳೆಂದೂ ಸದ್ದು ಮಾಡುವುದಿಲ್ಲ.
ಬುದ್ಧಿವಂತನೆಂದರೆ ನಾಣ್ಯದಂತಲ್ಲದೆ ನೋಟಿನಂತಿರಬೇಕು.."

ನಿರುಪಮಾ, ಬೆಂಗಳೂರು

## ಪ್ರಶ್ನೋತ್ತರ

ಪ್ರ: ಭಾರತದ ರಾಷ್ಟ್ರ ಪಕ್ಷಿ ಯಾವುದು?
ಉ: ನವಿಲು
ಪ್ರ: ಡಾ. ಕೆ.ವಿ. ಪುಟ್ಟಪ್ಪನವರ ಇವರ ಕಾವ್ಯನಾಮ ಏನು?
ಉ: ಕುವೆಂಪು
ಪ್ರ: ಸಿ.ಪಿ. ಕೃಷ್ಣಶರ್ಮರವರ ಕಾವ್ಯನಾಮ ಏನು?
ಉ: ಸಿಪಿಕೆ.
ಕರ್ನಾಟಕ ರತ್ನ ಪ್ರಶಸ್ತಿ2005 ರಲ್ಲಿ ಪಡೆದವರು ಯಾರು?
ಉ: ಭೀಮಸೇನ ಜೋಷಿ

## ಜನರೇಷನ್ ಗ್ಯಾಪ್

**ಇಂದಿನ ತಲೆಮಾರು :**

5. ಗಂಡ- ಹೆಂಡಿನ ವಯಸ್ಸಿನಲ್ಲಿ ಹೆಚ್ಚಿನ ಅಂತರ ಇಲ್ಲದವರು
6. ಕೆಲವೇ ವಿಷಯಗಳ ಮೇಲೆ ಪರಿಪೂರ್ಣ ಜ್ಞಾನ ಮಾತ್ರ ನೀಡುವ ವಿದ್ಯಾಭ್ಯಾಸವನ್ನು ಪಡೆದು ವ್ಯವಹಾರ ಜ್ಞಾನದ ಕೊರತೆ ಇರುವವರು.
7. ಗುರುಶಿಷ್ಯರ ನಡುವೆ ಕೇವಲ ವ್ಯಹಾರ ಸಂಬಂಧ ಇರುವವರು.
8. ಉದ್ಯೋಗಿಗಳಾಗಿ ಸ್ಪರ್ದಾತ್ಮಕ ಮನೋಭಾವ
9. ಹೆಚ್ಚುತ್ತಿರುವ ವಿದೇಶಿ ವ್ಯಾಮೋಹ ಹಾಗೂ ವಿದೇಶಿ ಪ್ರಯಣಕ್ಕೆ ಹೆಚ್ಚಿನ ಅವಕಾಶಗಳನ್ನು ಹೊಂದಿರುವವರು.

..... ಮುಂದುವರಿಯುವುದು

## ಸ್ವಲ್ಪ ನಗ್ತೀರಾ ಪ್ಲೀಸ್....?

ಸಂಸತ್ ಸದಸ್ಯರ ವೇತನ, ಭತ್ಯೆ ವಗೈರೆಗಳು ತೀವ್ರ ಹೆಚ್ಚಳ ಎಂದು ಪತ್ರಿಕೆಯಲ್ಲಿನ ಸುದ್ದಿ.
- ಅದಕ್ಕೇ ಅವರನ್ನು ಇನ್ನು ಮುಂದೆ ಸಂಪತ್ ಸದಸ್ಯ ! ಎಂದು ಕರೆಯಬಹುದು.

ಸರಳ, ಮಂಡ್ಯ

## ನವರಾತ್ರಿಯಲ್ಲಿ ನೃತ್ಯ ಕಾರ್ಯಕ್ರಮ



ಮಹಿಳಾಮಣಿಗಳು ಕಾರ್ಯಕ್ರಮವೊಂದರ ಸಿದ್ಧತೆಯಿಂದ ಕೂಡಿರುವ ಹಾಗೂ ಸೆಲ್ಫಿ ದೃಶ್ಯಗಳು

### ಪದಗಳನ್ನು ಓದಿ ಮುಂದುವರಿಸಿ...

| | | | |
|---|---|---|---|
| ಪೇಪರ್ | ಪಾಪರ್ | ಊಪರ್ | ಚೊಪರ್ |
| ನೀಪರ್ | ಹೈಪರ್ | ಕಾಪರ್ | ಗೀಪರ್ |
| ಚಾಟರ್ | ಜಾಟರ್ | ಟಾಪರ್ | ನೇಚರ್ |
| ಪಂಚರ್ | ಬಂಪರ್ | ಮಂಪರ್ | ಬಾಬರ್ |
| ರೂಸ್ಟರ್ | ಸಾಸರ್ | ಹಾರ್ಬರ್ | ಮೇಕರ್ |

**- ಸುಮತಿ, ಮಂಡ್ಯ**

### THOUGHTS

Life is like an ice cream
enjoy it before it melts;
I have a pen that is blue
I have a friend that is you,
Friend friend friend
our life is going to end.

**Deepika, Bengaluru**

## ಆಯ್ಕೆ ಪಟ್ಟಿ ಪ್ರಕಟ

ಖಾಲಿ ಇದ್ದ ಮಹಿಳಾ ಹಾಗೂ ಪುರುಷರ ಸಿವಿಲ್ ಪೊಲೀಸ್‌ಕಾನ್ಸ್‌ಟೇಬಲ್ ಹುದ್ದೆಗಳಿಗೆ ಆಯ್ಕೆ ಮಾಡಿದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಮೈಸೂರು ಜಿಲ್ಲಾ ಪೊಲೀಸ್ ಕಛೇರಿ ಹಾಗೂ ಪೊಲೀಸ್ ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಪೊಲೀಸ್ ಅಧೀಕ್ಷಕರು

## ಸಂದರ್ಶನ

ಎಸ್‌ಎಸ್‌ಎಲ್‌ಸಿ/ಪಿಯುಸಿ/ಪದವೀಧರರು,ಐಟಿಐ/ಡಿಪ್ಲಮಾ ಪಾಸಾದ ಮಹಿಳಾ ಹಾಗೂ ಪುರುಷ ಭ್ಯರ್ಥಿಗಳಿಗೆ ಅ. 20ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ತುಮಕೂರು ಇಲ್ಲಿ ಸಂದರ್ಶನವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 0816-2278488 ಸಂಪರ್ಕಿಸಿ.



ಮೈಸೂರು ಅರಮನೆಯಲ್ಲಿನ ಯುವರಾಜರ ಖಾಸಗಿ ದರ್ಬಾರ್‌ನ ಕೆಲವು ದೃಶ್ಯಗಳು



ಗುಲಾಬಿ ಹೂಗಳ ಅಂದವೇ ಅಂದ ನೋಡಲು ಬಲು ಚೆಂದ

### ಸುಂಸುಂನೆ : ಮದುವೆ ಆಗ್ಬೇಕು

ನಾನೇ ಪ್ರತಿದಿನ ಅಡುಗೆ ಮಾಡಿಕೊಂಡು ಮಾಡಿಕೊಂಡು ಬೇಜಾರಾಗಿದೆ ಕಣಯ್ಯ ಅದಕ್ಕೆ ಬೇಗ ಒಂದು ಮದ್ವೆ ಆಗ್ಬೇಕು ಅಂತ ಇದ್ದೀನಯ್ಯ ಎಂದು ರಮೇಶ ತನ್ನ ಗೆಳೆಯನ ಬಳಿ ಹೇಳಿದ. ಅಯ್ಯೋ ಪೆದ್ದ ನಾನು ಅದೇ ಕಾರಣಕ್ಕೇನೇ ಡೈವೋರ್ಸ್ ಕೊಡಬೇಕಂತಾ ಇದ್ದೀನಪ್ಪಾ ಅಂತ ಸುರೇಶ ತನ್ನ ಗೆಳೆಯ ರಮೇಶನ ಅಭಿಪ್ರಾಯಕ್ಕೆ ಪ್ರತಿಕ್ರಿಯೆ ಕೊಟ್ಟ. ಆಗ ರಮೇಶನ ಮುಖ ಇಂಗು ತಿಂದ ಮಂಗನಂತಾಯಿತು.

ವಿನೋದ, ಮೈಸೂರು

**ಈ ಪತ್ರಿಕೆಯನ್ನು ಓದಿ ನಿಮ್ಮಲ್ಲಿರುವ ಮಾಹಿತಿಗಳನ್ನು ನೀಡಿ ಪತ್ರಿಕೆಯನ್ನು ಬೆಳೆಸಿ.**

ಈ ಜಾಗ ಓದುಗರಿಗಾಗಿ ಸ್ವಂತ ನಗೆಹನಿ, ಬರಹ, ಚುಟುಕು, ಕವನ ಇತ್ಯಾದಿಗಳನ್ನು ಪ್ರಕಟಿಸಲು ಕಳುಹಿಸಿಕೊಡಿ. ಪ್ರಕಟಿಸಲು ಕೆಲವು ಮಾನದಂಡಗಳನ್ನು ಅಳವಡಿಸಲಾಗಿದೆ. ಪ್ರಕಟಿಸುವ ವಿಚಾರ ಪತ್ರಿಕೆಯ ಮಂಡಳಿಕೆ ಸೇರಿದ್ದಾಗಿರುತ್ತದೆ.

# ನೇಮಕಾತಿ ಅಂಕಣ

## ಅರ್ಜಿ ಆಹ್ವಾನ

ಬಾಲ ನ್ಯಾಯ ಕಾಯ್ದೆ 2010 ತಿದ್ದುಪಡಿ 2006 ಅನ್ವಯ ಜಿಲ್ಲೆಗಳಲ್ಲಿ ಮಕ್ಕಳ ಸಮಿತಿ ಸದಸ್ಯತ್ವಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ವಯೋಮಿತಿ 30 ರಿಂದ 60 ವರ್ಷಗಳು ಸಮಾಜ ಶಾಸ್ತ್ರ, ಸಮಾಜಕಾರ್ಯ, ಮಕ್ಕಳ ಮನಃಶಾಸ್ತ್ರ, ಆರೋಗ್ಯ ಕ್ಷೇತ್ರದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕನಿಷ್ಠ ಮೂರು ವರ್ಷಗಳ ಅನುಭವವಿರಬೇಕು. ಅರ್ಜಿ ಸಲ್ಲಿಸಲು ಅಕ್ಟೋಬರ್ 31 ರಂದು ಕೊನೆಯ ದಿನ ಹಾಗೂ ಹೆಚ್ಚಿನ ಮಾಹಿತಿಗಾಗಿ 0821-2543003 ದೂರವಾಣಿಗೆ ಸಂಪರ್ಕಿಸುವುದು.

**ಪ್ರಚಾರ ಭಾರತಿ ದೂರದರ್ಶನ ಕೇಂದ್ರ**

ಬೆಂಗಳೂರಿನ ಪ್ರಸಾರ ಭಾರತಿ ದೂರದರ್ಶನ ಕೇಂದ್ರದ ಪ್ರಾದೇಶಿಕ ಸುದ್ದಿ ವಿಭಾಗದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಗದಿತ ನಮೂನೆಯಲ್ಲೇ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತೆ. ಹೆಚ್ಚಿನ ಮಾಹಿತಿಗಾಗಿ ದೂ. 080-23439377/23333201-206ಕ್ಕೆ ಸಂಪರ್ಕಿಸಿ ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 26-10-2015

**ಐಟಿಬಿಪಿಎಫ್‌ನಲ್ಲಿ ಇನ್ಸ್‌ಪೆಕ್ಟರ್**

ಇಂಡೋ- ಟಿಬೇಟಿಯನ್ ಬಾರ್ಡರ್ ಪೊಲೀಸ್ ಫೋರ್ಸ್‌ನಲ್ಲಿ ಗ್ರೂಪ್-ಬಿ ಹುದ್ದೆಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಅರ್ಹ ಅಭ್ಯರ್ಥಿಗಳು www.itbpolice.nic.in ವೆಬ್‌ಸೈಟ್ ನೋಡಿ ಹಾಗೂ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 23-10-2015.

**ಭಾಷಾ ಅಲ್ಪಸಂಖ್ಯಾತರ ಆಯೋಗ**

ಆಯುಕ್ತರು, ಭಾಷಾ ಅಲ್ಪಸಂಖ್ಯಾತರ ಆಯೋಗ, ನವದೆಹಲಿ ವತಿಯಿಂದ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗೆ www.nclm.nic.in ನೋಡಿ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 18-11-2015

**ಕಾರ್ಮಿಕರ ರಾಜ್ಯ ವಿಮಾ ನಿಗಮ**

ESICಬೆಂಗಳೂರು ವತಿಯಿಂದ ವಿವಿಧ ಹುದ್ದೆಗಳಿಗೆ ವಿಕಲ ಚೇತನ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಯನ್ನುwww. esickar.gov.in ನೋಡಿ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31-10-2015.

**ಮೇಲ್ ವಿಳಾಸ**

ಇದು ನಿಮ್ಮ ನೆಚ್ಚಿನ ಪತ್ರಿಕೆ. ಪ್ರಕಟಿಸಬಹುದಾದ ಸುದ್ದಿ, ಮಾಹಿತಿ, ಫೋಟೋಗಳಿದ್ದರೆ ಮೈಲ್ ಮಾಡಿ.
www.mahilavishesha@yahoo.com

- ಸಂಪಾದಕರು

**ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ.**



# ಪುಟಾಣಿ - ಬಟಾಣಿ



## ಮಾವಿನ ಮರದ ಸಾಕ್ಷಿ

ಆಗ ಅಕ್ಬರನು ನಿನ್ನ ಹೇಳಿಕೆಯನ್ನು ಸಾಧಿಸಿ ನಿರೂಪಿಸಲು ನಿನ್ನ ಬಳಿ ಯಾವ ಸಾಕ್ಷ್ಯಾಧಾರಗಳು ಇಲ್ಲ. ಹೇಗೆ ತಾನೇ ಅಭೇಸಿಂಹನಿಂದ ನಿನ್ನ ವರಹ ಕೊಡಿಸಲು ಸಾಧ್ಯ? ಎಂದ ಬೀರಬಲ್ಲ ಹೇಗಾದರೂ ಆಗಲಿ, ಅಭೇಸಿಂಹನನ್ನು ಕರೆಸಿ ಕೇಳೋಣ. ಈ ಬ್ರಾಹ್ಮಣನನ್ನು ನೋಡಿದರೆ ತನ್ನ ನಂಬಿಕೆಯಿಂದಲೇ ವಂಚಿತನಾದಂತೆ ಕಾಣುತ್ತಿದ್ದಾನೆ. ಆಗ ಅರಸನು ಅಭೇಸಿಂಹನನ್ನು ಅರಮನೆಗೆ ಬರಹೇಳಿದ.

ರಾಜನ ಆಜ್ಞೆಯಂತೆ ಅಭೇಸಿಂಹನು ಅರಮನೆಗೆ ಬಂದನು. ಅವನ ಮೇಲೆ ಬಂದಿರುವ ದೂರನ್ನು ಹೇಳಿದಾಗ ಅಭೇಸಿಂಹನು ಎರಡೂ ಕೈಗಳನ್ನು ತನ್ನ ಕಿವಿಗಳ ಮೇಲಿಟ್ಟುಕೊಂಡು ಸಭ್ಯನಂತೆ ಸ್ವಾಮಿ ನಾನು ಆಸ್ಥಾನಿಕ, ಯಾರಿಂದಲೂ ನಾನು ಒಂದು ಕವಡೆಯನ್ನೂ ಪಡೆಯುವುದಿಲ್ಲ. ಈ ಬ್ರಾಹ್ಮಣ ಸುಳ್ಳುಗಾರ. ನನ್ನ ಕೀರ್ತಿಗೆ ಮಸಿ ಬಳಿಯಲು ನನ್ನ ಮೇಲೆ ಸುಳ್ಳು ಅಪವಾದಗಳನ್ನು ಹೊರಿಸಿದ್ದಾನೆ. ನನಗೆ ಆತನು ವರಾಹವನ್ನು ಕೊಟ್ಟಿದ್ದೇ ಆದರೆ ಅದನ್ನು ದೃಢಪಡಿಸಲು ಸಾಕ್ಷಿ ಯಾರು ಎಂದನು.

ಆಗ ಬೀರಬಲ್ಲನು ಬ್ರಾಹ್ಮಣನು ವರಾಹವನ್ನು ಮರದ ಅಡಿ ಕೊಟ್ಟೆ. ಅದೇ ಸಾಕ್ಷಿ. ಅಲ್ಲದೆ ಅದರ ಪಕ್ಕದಲ್ಲೇ ಒಂದು ಹಸುವೂ ಮಲಗಿತ್ತು. ಎಂದು ಹೇಳಿದಾಗ ಅಭೇಸಿಂಹನು ಕೋಪದಿಂದ ಸ್ವಾಮಿ, ಅವನ್ನು ಸಾಕ್ಷಿಯಾಗಿ ಕರೆಯಲು ಸಾಧ್ಯವೇ ಈ ಬ್ರಾಹ್ಮಣ ಮೋಸಗಾರ ಅಂದನು. ತಪ್ಪನ್ನು ಒಪ್ಪಿಕೊಳ್ಳಲು ತಯಾರಿಲ್ಲ ಹಾಗೂ ಬ್ರಾಹ್ಮಣನ ಮೇಲೆ ಇಲ್ಲಸಲ್ಲದ್ದನ್ನು ಹೇಳಿದನು. ಸಾಕ್ಷಿಗಳೇ ಇಲ್ಲದ್ದರಿಂದ ಅರಸನು ಅವನ ಮಾತನ್ನು ನಂಬಿ ವಾಪಸ್ಸು ಕಳುಹಿಸಿದ.

.....ಮುಂದುವರೆಯುವುದು

- ಮಾಲಾ, ಬೆಂಗಳೂರು

## ನವರಾತ್ರಿ ಉತ್ಸವದಲ್ಲಿನ ನೃತ್ಯದ ಫೋಟೋ ನೋಡಿ ಆನಂದಿಸಿ







## ನವಯುಗದ ವಿಶ್ರಾಂತಿ ವಿಧಾನಗಳು

**ಯೋಗ ಮತ್ತು ಧ್ಯಾನ** ಭಾರತದ ಒಂದು ಸರ್ವೋತ್ತಮ ಚಿಕಿತ್ಸಾ ಪದ್ಧತಿ. ಅದು ಚಿಕಿತ್ಸೆಯ ಆಗರ. ಧ್ಯಾನ ಅಭ್ಯಾಸದ ಜೊತೆಗೆ ಯೋಗವನ್ನು ಸೇರಿಸಿದಾಗ ಯೋಗ ಧ್ಯಾನ. ಯೋಗ ನಿದ್ರೆ ಹೀಗೆ ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಒತ್ತಡ ನಿವಾರಿಸುವ ವಿಧಾನವಾಗಿದೆ.

2. **ಸುಪ್ತ ಸಮಾಧಿ ಸ್ಥಿತಿಯ ಯೋಗ ಧ್ಯಾನ** / ಅತೀಂದ್ರಿಯ ಧ್ಯಾನ ಮಹರ್ಷಿ ಮಹೇಶ ಯೋಗಿ ಮೂರು ದಶಕಕ್ಕೂ ಮೀರಿ ಹಿಂದೆ ಸಾಧಿಸಿದ 20 ನಿಮಿಷಗಳ ವಿಧಾನ. ವಿರಾಮದಿಂದ ಇರಲು ರಚನಾತ್ಮಕವಾಗಿ ಚಿಂತಿಸಲು ಇದು ಸಹಾಯ ಮಾಡುತ್ತದೆ.

3. **ಪ್ರಾಣಿಕ್ ಹೀಲಿಂಗ್:** ದೇಹದಲ್ಲಿ ಶಕ್ತಿ ಕೇಂದ್ರಗಳು ಅಥವಾ ಚಕ್ರಗಳು ಇರುತ್ತವೆ. ಒತ್ತಡಗಳ ಸಮಯದಲ್ಲಿ ಈ ಚಕ್ರಗಳು ಕಟ್ಟಿಕೊಂಡು ಅಡ್ಡಿ ಮಾಡುತ್ತದೆ. ಈ ವಿಧಾನ ಚಿಕಿತ್ಸೆ ಕೊಡುವವರು ತಮ್ಮ ಮೂಲಕ ನರಳುವವವರಿಗೆ ಪ್ರಾಣದ ಶಕ್ತಿಯನ್ನು ಹರಿಸುತ್ತಾರೆ.

...... ಮುಂದುವರೆಯುವುದು.

# ನಮ್ಮ ಮಕ್ಕಳು

ಆರ್. ವಿಶಾಲಾಕ್ಷಿ ಗುಂಡೂರಾವ್
ನಿವೃತ್ತ ಶಿಕ್ಷಕಿ, ಮೈಸೂರು

ಮಕ್ಕಳು ಕ್ರಿಯಾಶೀಲರಾಗಿ, ಜ್ಞಾನವಿಕಾಸವಾಗುವ ಆಟಿಕೆಗಳಿಗಿಂತ ಮೊಬೈಲ್ ಬಗ್ಗೆ ಹೆಚ್ಚು ಒಲವನ್ನು ತೋರಿಸುತ್ತಾರೆ. ಇದರಿಂದ ಮಕ್ಕಳಿಗೆ ಬೌದ್ಧಿಕವಾಗಿ ದೈಹಿಕವಾಗಿ ಹೆಚ್ಚಿನ ಕಸರತ್ತಿಲ್ಲದೆ ದೇಹದ ಬೆಳವಣಿಗೆ ಕುಂಠಿತವಾಗುವುದಲ್ಲದೆ, ತಂದೆ- ತಾಯಿ, ಅಕ್ಕ- ತಮ್ಮ, ಅಜ್ಜ- ಅಜ್ಜಿ, ಸಂಗಾತಿ- ಯಾರ ಬಗ್ಗೆಯೂ ಸಂಬಂಧಗಳೇ ಇಲ್ಲದಂತಾಗುತ್ತದೆ. ಇದರ ಜೊತೆಗೆ T.V. ಮಾಧ್ಯಮದಿಂದಲೂ ಮಕ್ಕಳೂ ಕಾರ್ಟೂನ್, ಛೋಟಾಭೀಮ್ ಹೀಗೆ ಹಲವಾರು ವಿಚಾರಗಳನ್ನು ನೋಡುತ್ತ ಕಾಲ ಕಳೆಯುತ್ತಾರೆ. ಮಕ್ಕಳಿಗೆ ಇದೊಂದು ಚಟವೇ ಆಗಿದೆ ಎನ್ನಬಹುದು. ಅದಿಲ್ಲದೆ ಊಟ- ತಿಂಡಿ ಸಹ ಮಾಡುವುದಿಲ್ಲ. ಅಷ್ಟೇನು ಒಂದೆರಡು ದಿನ ಟಿ.ವಿ. ಇಲ್ಲದಿದ್ದರೆ ಮಕ್ಕಳು ಖಿನ್ನರಾಗಿ ಇರುವುದನ್ನು ನಾವು ನೋಡುತ್ತೇವೆ.

ಇಷ್ಟೆಲ್ಲಾ ಸಮಸ್ಯೆಗಳ ಸರಮಾಲೆಗಳ ಮಧ್ಯೆ ಮಕ್ಕಳನ್ನು ಸುಸಂಸ್ಕೃತರಾಗಿ ಸುಶಿಕ್ಷಿತರಾಗಿ ಹೇಗೆ ಬೆಳೆಸುವುದು?ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಲೇ ಇದೆ. ಈ ಬಗ್ಗೆ ವಿಚಾರಶೀಲರಾಗಬೇಕಾದ್ದು ಎಲ್ಲರ ಕರ್ತವ್ಯವಾಗಿದೆ.

ಇಂದಿನ 'ಮಕ್ಕಳೇ ಮುಂದಿನ ಜನಾಂಗ', 'ಮಕ್ಕಳೇ ಮನೆಯಮಾಣಿಕ್ಯ' , ಮಕ್ಕಳೇ ದೇಶದ ಆಸ್ತಿಎಂದೆಲ್ಲಾ ಘೋಷಣೆಗಳನ್ನು ಕೂಗಿದ ಮಾತ್ರಕ್ಕೆ ಮಕ್ಕಳು ನಾವಂದುಕೊಂಡಂತೆ ಬೆಳೆಯಲು ಸಾಧ್ಯವಿಲ್ಲ. ಅದಕ್ಕಾಗಿ ಪೋಷಕರು, ಶಿಕ್ಷಕರು, ಸಮಾಜ ಎಲ್ಲರೂ ಒಟ್ಟಾಗಿ ಕಾರ್ಯಪ್ರವೃತ್ತರಾಗಬೇಕು. ಅದಕ್ಕಾಗಿ ಏನು ಮಾಡಬಹುದು?

...... ಮುಂದುವರೆಯುವುದು.

## ಸುಗಮ ಸಂಗೀತ ಸ್ಪರ್ಧೆ

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಕೇಂದ್ರದಲ್ಲಿ ಗೊ.ರು.ಚ. ಅಂತರ ಕಾಲೇಜು ಸುಗಮ ಸಂಗೀತ ಸ್ಪರ್ಧೆಯನ್ನು ಮಾಜಿ ಜಿಲ್ಲಾ ಅಧ್ಯಕ್ಷ ಶೈಲಜಾ ಶಿವಣ್ಣ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷೆ ಪ್ರೇಮಾ ಆರ್. ಸ್ವಾಮಿ ಉಪಸ್ಥಿತರಿದ್ದರು. ವಿವಿಧ ಕಾಲೇಜಿನಿಂದ ಗೆದ್ದು ಬಂದವರಿಗೆಲ್ಲರಿಗೂ ಬಹುಮಾನ ವಿತರಣೆ ಮಾಡಲಾಯಿತು.

## ಮಲಾಲಾರವರ ಎಂತಹ ಮಾತು !

ನಾವು ಸರಿಯಾದ ಮಾರ್ಗದಲ್ಲಿ ನಡೆಯುತ್ತಿದ್ದರೆ ಭಾರತೀಯರೂ ಕೂಡ ನಮ್ಮನ್ನು ಬೆಂಬಲಿಸುತ್ತಾರೆ ಎಂದು ನೊಬೆಲ್ ಪಾರಿತೋಷಕದ ಅತಿ ಕಿರಿಯ ವಯಸ್ಸಿನ ಹುಡುಗಿ ಮಲಾಲಾ ಯೂಸುಫ್ ಜಾಯ್ ಹೇಳಿದ್ದಾರೆ. ಜನರ ಪ್ರೀತಿ, ಮಮತೆ, ಗೌರವ ಸ್ವೀಕರಿಸಲು ಭಾರತಕ್ಕೆ ಭೇಟಿ ನೀಡಲು ಉತ್ಸುಕತೆಯಿಂದಿದ್ದು ಭೇಟಿ ಮಾಡುವುದಾಗಿ ಖಾಸಗಿ ಟಿವಿ ಚಾನಲ್‌ವೊಂದರಲ್ಲಿ ತಿಳಿಸಿದ್ದಾರೆ.

## ಮಹಿಳಾ ವಿಶೇಷ ಕನ್ನಡ ವಾರಪತ್ರಿಕೆ

**ಮೈಸೂರು ಕಛೇರಿ :** ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

ಮಾನ್ಯರೇ,

ಮಹಿಳಾ ವಿಶೇಷ ಪತ್ರಿಕೆಯ 1ವರ್ಷ/ 2 ವರ್ಷ/ 3 ವರ್ಷಯ / 5 ವರ್ಷ/ ಅಜೀವ/ ಪೋಷಕ / ಮಹಾ ಪೋಷಕ ಚಂದಾದಾರರಾಗಲು ರೂ.............................. ಬ್ಯಾಂಕ್ ಡಿಡಿ ಚೆಕ್ / ಎಂ. ಓ. ಕಳುಹಿಸುತ್ತಿದ್ದೇನೆ. ನನಗೆ ಪ್ರತಿವಾರವೂ ಪತ್ರಿಕೆಯನ್ನು ನನ್ನ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ.

ದಿನಾಂಕ : ಸಹಿ :

## ಚಂದಾ ವಿವರ

ವಾರ್ಷಿಕ ಪತ್ರಿಕೆಗೆ ಚಂದಾ, ಅಂಚೆ ವೆಚ್ಚಕ್ಕಾಗಿ ಹಾಗೂ ಪತ್ರಿಕೆಯ ಅಭಿವೃದ್ಧಿ ಹಾಗೂ ಏಳಿಗೆಗಾಗಿ ಈ ಕೆಳಕಂಡಂತೆ ಚಂದಾ ಹಣವನ್ನು ನಿಗದಿಪಡಿಸಲಾಗಿದೆ.

| | | | |
|---|---|---|---|
| **1 ವರ್ಷಕ್ಕೆ** | ...... | ರೂ. | **501/-** |
| **2 ವರ್ಷಕ್ಕೆ** | ...... | ರೂ. | **1,001/-** |
| **3 ವರ್ಷಕ್ಕೆ** | ...... | ರೂ. | **1,501/-** |
| **5 ವರ್ಷಕ್ಕೆ** | ...... | ರೂ. | **2,501/-** |
| **ಆ ಜೀವ ಸದಸ್ಯತ್ವಕ್ಕೆ** | ...... | ರೂ. | **5,001/-** |
| **ಪೋಷಕ ಸದಸ್ಯತ್ವಕ್ಕೆ** | ...... | ರೂ. | **10,001/-** |
| **ಮಹಾಪೋಷಕ ಸದಸ್ಯತ್ವಕ್ಕೆ** | ..... | ರೂ. | **25,001/-** |

ಪ್ರತಿಮನೆಯಲ್ಲಿ ತಾಯಿ, ಹೆಂಡತಿ, ಹೆಣ್ಣು ಮಕ್ಕಳು, ಅಕ್ಕ, ತಂಗಿ, ಅತ್ತಿಗೆ, ಅತ್ತೆ ಎಲ್ಲರೂ ಅಥವಾ ಯಾರಾದರೂ ಇದ್ದೇ ಇರುತ್ತಾರೆ. ನಿಮಗೆ ಇಷ್ಟ ಬಂದವರ ಹೆಸರಲ್ಲಿ ಪತ್ರಿಕೆ ಅಭಿವೃದ್ಧಿಗೆ ಪ್ರೋತ್ಸಾಹವನ್ನು ನೀಡಬೇಕೆಂದು ಕೋರಿದೆ. ಈ ಪತ್ರಿಕೆಯಿಂದ ಒಳ್ಳೆಯ ಮಾಹಿತಿಗಳನ್ನು ಜೀವನದಲ್ಲಿ ಟೆನ್‌ಷನ್ ಫ್ರೀಯಾಗಿರಲು ವಿಷಯಗಳನ್ನು ನೀಡುವುದೇ ಪತ್ರಿಕೆಯ ಉದ್ದೇಶವಾಗಿದೆ. ಯೋಚಿಸಿ ಒಂದು ಒಳ್ಳೆಯ ನಿರ್ಧಾರಕ್ಕೆ ಬನ್ನಿ. ನಿಮ್ಮ ಬಂಧು, ಬಳಗ, ಸ್ನೇಹಿತರಿಗೆ ತಿಳಿಸಿ. ನೀವು ಹಾಗೂ ಅವರನ್ನು ಚಂದಾದಾರರನ್ನಾಗಿ ಮಾಡಬೇಕೆಂದು ವಿನಂತಿಸಿದೆ.

**"ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ."**



ಜಗದ್ವಿಖ್ಯಾತ ಮೈಸೂರು ಅರಮನೆಯ ದೃಶ್ಯ

## ವಿಜಯದಶಮಿಯಂದು ಗಂಗಾ



ರಾಮು ಫಿಲಂಸ್ ಮಾಲೀಕ ನಿರ್ಮಾಣವಾಗಿರುವ ಗಂಗಾ ಸಂಸ್ಥೆಯ 35ನೇ ಕೊಡುಗೆ. ಈ ಚಿತ್ರದಲ್ಲಿ ಮಾಲಾಶ್ರೀ ಮೊಟ್ಟ ಮೊದಲನೆಯದಾಗಿ ಒಬ್ಬ ಆಟೋ ಡ್ರೈವರ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದು ನಿರ್ದೇಶಕ ಸಾಯಿ ಪ್ರಕಾಶ್ ಹಾಗೂ ನಟಿ ಮಾಲಾಶ್ರೀ ಅವರ ಕಾಂಬಿನೇಷನ್‌ನಿಂದ ಬರುತ್ತಿರುವ ಚಿತ್ರವಾಗಿದೆ. ನಟಿ ಮಾಲಾಶ್ರೀಯನ್ನು ಮತ್ತೆ ತೆರೆ ಮೇಲೆ ನೋಡಲು ಅವರ ಅಭಿಮಾನಿ ಬಳಗ ಕಾತುರದಲ್ಲಿದ್ದಾರೆ.

## ಲೀವ್ ಲವ್ ಆಫ್ ಆರ್ಗನೈಸೇಷನ್



ಈ ಸಂಸ್ಥೆಯನ್ನು ಕನ್ನಡತಿ, ಶ್ರೇಷ್ಠ ಹಾಗೂ ಬಹು ಬೇಡಿಕೆಯುಳ್ಳ ನಟಿ ದೀಪಿಕಾ ಪಡುಕೋಣೆ ಯವರು ಇದೇ ತಿಂಗಳ 10 ರಂದು ಆರಂಭಿಸಿದ್ದಾರೆ. ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವೆಂದು ಭಾವಿಸಿ ಈ ಸಂಸ್ಥೆ ಉದಯಿಸಿದೆ ಎಂದು ದೀಪಿಕಾ ತಿಳಿಸಿದ್ದಾರೆ. ಇದಕ್ಕೆ ದೀಪಿಕಾ ತಾಯಿ ಉಜ್ವಲ ಪಡುಕೋಣೆ ಹಾಗೂ ತಂದೆ ಪ್ರಕಾಶ್ ಪಡುಕೋಣೆಯವರ ಪೂರ್ಣ ಬೆಂಬಲವೂ ಕೂಡಾ ಇದೆ ಎಂದು ತಿಳಿಸಿದ್ದಾರೆ.

## ಗಲ್ಲಾ ಪೆಟ್ಟಿಗೆ ತುಂಬುತ್ತಿರುವ 'ಜಸ್ಬಾ'



ಕನ್ನಡತಿ ಹಾಗೂ ನಟಿ ಐಶ್ವರ್ಯ ರೈ ಬಚ್ಚನ್ ನಟಿಸಿರುವ 'ಜಸ್ಬಾ' ಚಿತ್ರ ತೆರೆಗೆ ಬಂದು ಒಂದು ವಾರವಷ್ಟೇ ಕಳೆದಿದ್ದು ಅಭಿಮಾನಿಗಳು ಜಯಕಾರ ಹಾಕುತ್ತಾ ನೆಚ್ಚಿನ ನಟಿಯನ್ನು ಹುರಿದುಂಬಿಸುತ್ತಿದ್ದಾರೆ. ಈ ಚಿತ್ರದಲ್ಲಿ ಐಶ್ವರ್ಯ ನ್ಯಾಯವಾದಿಯಾಗಿ ಜೊತೆಯಲ್ಲಿ ತಾಯಿಯ ಪಾತ್ರದಲ್ಲಿ ಕಾಣಿಸಿಕೊಂಡಿರುವುದು ಎಲ್ಲ ಕಡೆಗಳಿಂದಲೂ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ. ಇದು ಗಲ್ಲಾ ಪೆಟ್ಟಿಗೆಯನ್ನು ತುಂಬಿಸದೇ ಬಿಡುವುದಿಲ್ಲ ಕೋಟಿ ಕೋಟಿ ರೂಪಾಯಿಗಳು ಗಳಿಕೆ ಮಾಡುವ ಲಕ್ಷಣಗಳು ಕಾಣುತ್ತಿದೆ.


**ಮೈಸೂರು ನಗರದ ಜನತೆಗೆ ಆಯುಧಪೂಜೆ ಹಾಗೂ ವಿಜಯದಶಮಿ ಹಬ್ಬದ ಶುಭಾಶಯಗಳು**

**K.C. Anand**
Managing Director
**Bonal Hydro Electric Company Pvt. Ltd.**
Hotel Maharaja Complex, No. 365, J.L.B. Road, Mysore. Ph: 0821-2426665 Mob: 9740094000
E-mail:maharaja_ahok@yahoo.co.in

www.bsoftinfoindia.com
8867774447
0821-4195190
BSOFT INFOTECH
4th Cross, 6th Main, Paduvarahalli Mysuru.
Your own
Website
@
Rs.2000
Onwards
Thanking You in Advance ...

ನಗರದ ಜನತೆಗೆ ದಸರಾ ಹಬ್ಬದ ಶುಭಾಶಯಗಳು
ವಿಮಾ ಪಾಲಿಸಿಗಾಗಿ ಸಂಪರ್ಕಿಸಿ
**ಶ್ರೀವಿದ್ಯಾ**
**9242312441**

**ನಾಡಿನ ಜನತೆಗೆ ಆಯುಧಪೂಜೆ ಹಾಗೂ ವಿಜಯದಶಮಿ ಹಬ್ಬದ ಶುಭಾಶಯಗಳು ತಾಯಿ ಚಾಮುಂಡೇಶ್ವರಿ ದೇವಿ ತಮ್ಮೆಲ್ಲರ ಸಕಲ ಇಷ್ಟಾರ್ಥಗಳನ್ನು ನೇರವೇರಿಸಲಿ.**
**ಕೆ.ಆರ್. ಮೋಹನ್‌ಕುಮಾರ್**
ಅಧ್ಯಕ್ಷರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಜೆ.ಎಲ್.ಬಿ. ರಸ್ತೆ, ಮೈಸೂರು.
ಮೊ: 8105209999

**ನಗರದ ಜನತೆಗೆ ಆಯುಧಪೂಜೆ ಹಾಗೂ ವಿಜಯದಶಮಿ ಹಬ್ಬದ ಶುಭಾಶಯಗಳು ಚಾಮುಂಡೇಶ್ವರಿ ದೇವಿಯು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ**
ಎಂ. ಶಿವಣ್ಣ
ಕಾರ್ಪೋರೇಟರ್, 26ನೇ ವಾರ್ಡ್, ಹೆಬ್ಬಾಳ್
ಮೈಸೂರು ಮಹಾನಗರಪಾಲಿಕೆ, ಮೈಸೂರು
ಮೊ : 9449841026

**ಮೈಸೂರು ನಗರದ ಜನತೆಗೆ ಆಯುಧಪೂಜೆ ಹಾಗೂ ವಿಜಯದಶಮಿ ಹಬ್ಬದ ಶುಭಾಶಯಗಳು**
**ಸಿ.ಪಿ. ತಮ್ಮಣ್ಣ**
ರಾಜಕೀಯ ಮುಖಂಡರು
ಜನಮನರಂಗ, ಸಿದ್ಧಾರ್ಥನಗರ, ಮೈಸೂರು.
ಮೊ : 9620752999

**ಮೈಸೂರು ಜನತೆಗೆ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು**
**ತೇಜಸ್ ಬಿಲ್ಡರ್ಸ್**
**ಮೈಸೂರು**
ಸರ್ಕಾರಿ ನೌಕರರಿಗೆ ಮಾತ್ರಾ ಯಾವುದೇ ಅಡ್ವಾನ್ಸ್ ಇಲ್ಲದೆ ಶೇಕಡಾ 25ರಷ್ಟು ಕೆಲಸ ಮುಗಿಯುವವರೆಗೆ ಸಾಮಾನು ಸಹಿತ ವಾಸ್ತು ಪ್ರಕಾರ ಅಂದವಾಗಿ ಮನೆಯನ್ನು ಕಟ್ಟಿಕೊಡಲಾಗುವುದು.
ಸಂಪರ್ಕಿಸಿ : **8970308730 / 9845849004**

**ಹೊಸದಾಗಿ ಸದಸ್ಯತ್ವ ಬಯಸುವವರು ಸಂಪರ್ಕಿಸಿ 9379777793**



# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ**
**(ಪ್ರತಿ ಮಂಗಳವಾರ)**

**ಮೈಸೂರು ಕಛೇರಿ :**
ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

**ಬೆಂಗಳೂರು ಕಛೇರಿ :**
ಸಂಖ್ಯೆ 734, ನ್ಯೂ ಮಸೀದಿ ರಸ್ತೆ,
ಟಿ. ದಾಸರಹಳ್ಳಿ, ಬೆಂಗಳೂರು - 560 057

**ಹೆಚ್.ವಿ. ವೆಂಕಟಸುಬ್ಬರಾವ್,** ಸಂಪಾದಕರು **8880334444**
(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)


Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16